ಆದರೆ ಸದನ ನಡೆಯುವುದಿಲ್ಲವೆನ್ನುವಂತಹ ಮಾತನ್ನು ಹೇಳಿದ್ದೇನೆ. ಯಾರೇ ಆಗಬಹುದು. ಆ ಕಡೆ ಆಗಿರಬಹುದು, ಈ ಕಡೆ ಆಗಿರಬಹುದು, ಅದನ್ನು ಅವರು ಆ ರೀತಿ ಭಾವಿಸಿಕೊಂಡಿದ್ದರೆ ತಪ್ಪು ನನಗೆ ವಿರೋಧ ಪಕ್ಷದ ಬಗ್ಗೆ ಬಹಳ ಗೌರವ ಇದೆ. ಇದು ಜನರ ತೀರ್ಮ ಆದಮೇಲೆ ಕೆಲವರು ಆ ಕಡೆ ಕೆಲವರು ಈ ಕಡೆ ಕುಳಿತುಕೊಳ್ಳುತ್ತೇವೆ. ಮಾನ್ಯ ಜ್ಞಾನೇಂದ್ರ ಅವರು ಒಂದು ಮಾತು ಹೇಳಿದರು. ನಿಮಗೆ ನಾನು ಪಾಲ ಹೇಳುವುದಕ್ಕೆ ಪ್ರಯತ್ನ ಪಡುತ್ತಿದ್ದೇನೆ ಎಂದು ನಾನು ಯಾರಿಗೂ ಪಾಠ ಹೇಳುವುದಿಲ್ಲ. ನಾನು ಇನ್ನೂ ಸಾಯುವವರೆಗೂ ಕಲಿಯುವದೇ ಬಹಳ ಇದೆ ಎಂದು ತಿಳಿದುಕೊಂಡಿರುವ ಪೈಕಿ ನಾನು ಒಬ್ಬನು. ನಾನು ಯಾರಿಗೂ ಹೇಳುವುದಕ್ಕೆ ಪ್ರಯತ್ನ ಪಡುವುದಿಲ್ಲ. ಶ್ರೀವಾನ್ ಯಡಿಯೂರಪ್ಪನವರಿಗೆ ನಾನು ಇಷ್ಟೇ ಹೇಳುತ್ತೇನೆ. ನೀವು ಅಷ್ಟು ಶ್ರಮ ತೆಗೆದುಕೊಳ್ಳಬೇಕಾಗಿಲ್ಲ. ಅದನ್ನು ತೆಗೆಸಿ ನೋಡಿ ಇರಬೇಕಾ ಇರಬೇಡವೆ ಎಂದು. ನಾನು ಇಷ್ಟು ಹೇಳಿದ ಮೇಲೆ ಮಾನ್ಯ ಯಡಿಯೂರಪ್ಪನವರಿಗೆ ನಾನು ಅದರ ಅರ್ಹತೆಯನ್ನು ವಿರೋಧ ಪಕ್ಷದ ಸದಸ್ಯರನ್ನು ಮೊದಲ ಬಾರಿಗೆ ಬಂದಂತಹ ಗೆಳೆಯರನ್ನು ನಾನು ಕೆಳದೃಷ್ಟಿಯಿಂದ ನೋಡಿದ್ದೇನೆ. ಅಪಮಾನ ಮಾಡುವ ದೃಷ್ಟಿಯಿಂದ ನೋಡಿದ್ದೇನೆ ಎನ್ನುವುದು ಅವರಿಗೆ ನಿಜವಾಗಲೂ ಮನಸ್ಸಿಗೆ ಅನಿಸಿದರೆ ನೀವು ಏನು ಶಿಕ್ಷೆ ಕೊಟ್ಟರೂ ಸಂತೋಷದಿಂದ ಸ್ವೀಕಾರ ಮಾಡುವುದಕ್ಕೆ ನಾನು ತಯಾರಿಸಿದ್ದೇನೆ. ಅವರೇ ಹೇಳಲಿ, ಅವರ ತೀರ್ಪಿಗೆ ಬೇಡುತ್ತೇನೆ.

ಸಭಾಧ್ಯಕ್ಷರು : ನಾನು ಎರಡು ಸಾರಿ ಎದ್ದನಂತರ ಬಹಳಷ್ಟು ಸದಸ್ಯರು ನನ್ನ ಮನವಿಯನ್ನು ಕೇಳದೆ ತಮ್ಮ ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳಲಿಲ್ಲ. ಇದು ನನ್ನ ಮನಸ್ಸಿಗೆ ತುಂಬಾ ನೋವವನ್ನುಂಟು ಮಾಡಿದೆ. ವಿಷಯದ ಗಂಭೀರತೆಯನ್ನು ಅರಿತು ಚರ್ಚೆಯಲ್ಲಿ ಭಾಗವಹಿಸಿ ಉಪಯುಕ್ತ ಸಲಹೆಗಳನ್ನು ನೀಡಿ ಸರ್ಕಾರದಿಂದ ಉತ್ತರಗಳನ್ನು ಪಡೆಯಬೇಕು. ಈ ರೀತಿಯಾದರೆ ಸಭೆ ನಡೆಸುವುದು ತುಂಬಾ ಕಷ್ಟವಾಗುತ್ತದೆ. ಈ ಸಬೆಯ ಗೌರವ ಹೆಚ್ಚಾಗುವುದಿಲ್ಲ. ಆದುದರಿಂದ ನಾನು ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ಎಲ್ಲರೂ ಎದ್ದುನಿಂತುಕೊಂಡರೆ ನಾನು ಸುಮ್ಮನೆ ನೋಡುತ್ತಾ ಇಲ್ಲಿ ಕುಳಿತುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ದಯಮಾಡಿ ಮಾನ್ಯ ಸದಸ್ಯರು ಯಾವುದೇ ರೀತಿಯ ಭಾವೋದ್ವೇಗಕ್ಕೆ ಒಳಗಾಗದೆ ಆ ವಿಷಯದ ಗಂಭೀರತೆಯನ್ನು ಅರಿತು ಸರ್ಕಾರಕ್ಕೆ ಹೇಳತಕ್ಕಂಥ ಉತ್ತರವನ್ನು ಪಡೆಯತಕ್ಕಂಥ ಕೆಲಸವನ್ನು ಮಾಡಬೇಕು. ಸರ್ಕಾರ ಕೂಡ ಜವಾಬ್ದಾರಿಯಿಂದ ಆ ವಿಷಯದ ಗಂಭೀರತೆಯನ್ನು ಮಹತ್ವವನ್ನು ಅರಿತು ತಕ್ಷಣ ಪ್ರತಿಕ್ರಿಯಸತಕ್ಕಂಥ ಕೆಲಸವನ್ನು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಮನವಿ ಮಾಡುತ್ತೇನೆ.

ವಿಷಯ : ಅ) ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸುವ ಬಗ್ಗೆ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಕೊಠಡಿಯಲ್ಲಿ ಬಂದು ಒಂದು ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆಂದು

ಹೇಳಿದ್ದೆ. ತಾವು ಅನುಮತಿ ಕೊಟ್ಟಿದ್ದೀರಿ. ಅದು ಹೈಕೋರ್ಟ್ ಪೀಠದ ಬಗ್ಗೆ ಸರ್ಕಾರ ಒಂದು ಸ್ಪಷ್ಟ ನಿರ್ಧಾರವನ್ನು ಹೇಳಬೇಕು. ಏಕೆಂದರೆ ಇದುವರೆಗೆ ಉತ್ತರ ಕರ್ನಾಟಕದಲ್ಲಿ ಇದೊಂದು ದೊಡ್ಡ ಸಮಸ್ಯೆಯಾಗಿದೆ. 1956ರಲ್ಲಿ ಕರ್ನಾಟಕ ಏಕೀಕರಣ ಆದಾಗಿನಿಂದ ಇಲ್ಲಿಯವರೆಗೂ ಸಂಪೂರ್ಣವಾಗಿ ಉತ್ತರ ಕರ್ನಾಟಕವನ್ನು ಮರೆತಿದ್ದಾರೆ. ಭಾವನಾತ್ಮಕವಾಗಿ ಒಂದಾಗಿಲ್ಲ. ಇವತ್ತು ಉತ್ತರ ಕರ್ನಾಟಕದವರಿಗೆ ಪ್ರತಿ ಹೆಜ್ಜೆ ಹೆಜ್ಜೆಗೂ ಅನ್ಯಾಯವಾಗುತ್ತಿದೆ. ಹೈದಾರಾಬಾದ್ ಕರ್ನಾಟಕಕ್ಕೆ ಅನ್ಯಾಯವಾಗಿದೆ. ಉತ್ತರ ಕರ್ನಾಟಕಕ್ಕೆ ಅನ್ಯಾಯವಾಗಿದೆ. ಉತ್ತರ ಕರ್ನಾಟಕಕ್ಕೆ ಅನ್ಯಾಯವಾಗಿದೆ. ಕೊಡಗಿಗೆ ಅನ್ಯಾಯವಾಗಿದೆ. ಗಡಿ ಸಮಸ್ಯೆ ಬಂದಿರುವಾಗ ಈ ಹೈಕೋರ್ಟ್ ಪೀಠದ ಬಗ್ಗೆ ಒತ್ತಾಯ, ನಿರಂತರವಾಗಿ ನಡೆಯುತ್ತಿದೆ. ಅದರ ಬಗ್ಗೆ ಸರ್ಕಾರ ಪ್ರಮಾಣಿಕವಾದಂತಹ ಒಂದು ಹೇಳಿಕೆಯನ್ನು ಕೊಡಲೇಬೇಕು. ಇದು ಬಹಳ ಪ್ರಾಮುಖ್ಯತೆ ಇರತಕ್ಕಂಥದ್ದು. ಈಗಾಗಲೇ ಅಲ್ಲಿ ವಕೀಲರು ಮತ್ತೆ ಚಳುವಳಿ ಆರಂಭ ಮಾಡಬೇಕೆಂದು ಮಾಡಿದ್ದಾರೆ. ಒಂದು ಕಡೆ ಎರಡು ಕರ್ನಾಟಕದ ಕೂಗು ಎದ್ದಿದೆ. ಇದಕ್ಕೆ ಯಾರೂ ಬೆಂಬಲ ಕೊಡುವುದಕ್ಕಾಗುವುದಿಲ್ಲ. ಆದರೆ ಪರಿಸ್ಥಿತಿ ಉಲ್ಬಣವಾಗುವುದಕ್ಕೆ ಮುಂಚೆ, ಪರಿಸ್ಥಿತಿ ಜ್ವಾಲೆಯಾಗುವುದಕ್ಕೆ ಮುಂಚೆ ಸರ್ಕಾರ ಪ್ರಾಮಾಣಿಕವಾದಂತಹ ತೀರ್ಮಾನಕ್ಕೆ ಬರಬೇಕು. ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ತಮ್ಮ ಮೂಲಕ ನಾನು ತರುತ್ತಿದ್ದೇನೆ. ದಯವಿಟ್ಟು ಹೈಕೋರ್ಟ್ ಪೀಠಧ ಬಗ್ಗೆ ಮತ್ತು ಡಾ; ನಂಜುಂಡಪ್ಪ ವರದಿ ಏನು ಆಯಿತು ? ಏಕೆ ನಂಜುಂಡಪ್ಪ ಅವರನ್ನು ನೇಮಿಸಿದ್ದು ? ನಂಜುಂಡಪ್ಪ ವರದಿ ಕೊಟ್ಟಮೇಲೆ ಆ ವರದಿಯನ್ನು ಮೂಲೆಗುಂಪು ಹಾಕಿದವರು ಯಾರು ? ವರದಿ ಬಗ್ಗೆ ಎಷ್ಟು ಜವಾಬ್ದಾರಿಯುತವಾಗಿ ನಡೆದುಕೊಂಡಿದ್ದೀರಿ. ಉತ್ತರ ಕರ್ನಾಟಕವನ್ನು ಸಂಪೂರ್ಣವಾಗಿ ಕಡೆಗಾಣಿಸಿದ್ದೀರಿ, ಇದೆಲ್ಲಾ ದೃಷ್ಟಿಯಿಂದ ನಾವು ಕರ್ನಾಟಕದ ಭೂಪಟದಲ್ಲಿ ಇಲ್ಲ, ಕರ್ನಾಟಕದ ಹೊರಗೆ ಇದ್ದೇವೆ, ನಮ್ಮನ್ನು ಕಡೆಗಣಿಸಿದ್ದಾರೆ ಎನ್ನುವ ಭಾವನೆ ಸಮಗ್ರ ಉತ್ತರ ಕರ್ನಾಟಕದ ಜನರಲ್ಲಿ ಇದೆ. ಮಾನ್ಯ ಮುಖ್ಯಮಂತ್ರಿಯವರು ಈ ಬಗ್ಗೆ ಸಮಗ್ರವಾಗಿ ಉತ್ತರವನ್ನು ಕೊಡಬೇಕು. ಈ ಬಗ್ಗೆ ಸರ್ಕಾರದ ನಿಲುವು ಏನು ಎಂಬುದನ್ನು ಸ್ಪಷ್ಟಪಡಿಸಬೇಕು. ಈ ಬಗ್ಗೆ ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ಕಳಕಳಿಯ ಮನವಿ ಮಾಡುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ) : ಮಾನ್ಯ ಅಧ್ಯಕ್ಷರೆ, ಇದಕ್ಕೆ ರಾಜ್ಯಸರ್ಕಾರದಿಂದ ಸ್ಪಷ್ಟನೆ ಬೇಕಾಗುತ್ತದೆ. ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳು ಹೈದರಾಬಾದ್ ಕರ್ನಾಟಕದಿಂದ ಬಂದಂತಹವರು. ಅದರ ಬಗ್ಗೆ ಏನೇನಾಗಿದೆ ಎಂಬುದು ತಮಗೆ ಗೊತ್ತಿದೆ. ಹಿಂದೆ ಮುಖ್ಯ ನ್ಯಾಯಾಧೀಶರು ವರದಿಯನ್ನು ಒಪ್ಪಿಕೊಳ್ಳುವಂತಹ ಹಂತಕ್ಕೆ ಬಂದಂತಹ ಸಂದರ್ಭದಲ್ಲಿ ನಾವು ನೀವೆಲ್ಲಾ ಕೂಡಿಕೊಂಡು ಅವತ್ತಿನ ಮುಖ್ಯಮಂತ್ರಿಗಳ ಜೊತೆ ಮುಖ್ಯ

ನ್ಯಾಯಾಧೀಶರನ್ನು ನಾವು ಭೇಟಿಯಾಗಿದ್ದೆವು. ಆದರೆ ಮುಖ್ಯ ನ್ಯಾಯಾಧೀಶರು ಯಾವುದೇ ಒಂದು ನಿರ್ಣಯವನ್ನು ಕೈಗೊಳ್ಳಲಿಲ್ಲ. ಅದನ್ನು ಸ್ಪಷ್ಟನೆ ಮಾಡುತ್ತಿದ್ದೇವೆ. ಹಿಂದಿನದನ್ನು ನೆನಪು ಮಾಡುತ್ತಿದ್ದೇವೆ. ಹೋರಾಟ ಮತ್ತೆ ಪ್ರಾರಂಭವಾಗಿದೆ. ಅದಕ್ಕಾಗಿ ಮತ್ತೆ ನೀವು ಮುಖ್ಯ ನ್ಯಾಯಾಧೀಶರನ್ನು ಭೇಟಿಯಾಗಿ ಏಕೆಂದರೆ ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಆಗಬೇಕು ಎನ್ನುವ ಪರವಾಗಿ ಇವತ್ತು ನ್ಯಾಯಾಧೀಶರ ವರದಿ ಇರುವಾಘ, ಮುಖ್ಯ ನ್ಯಾಯಾಧೀಶರು ನಿರ್ಣಯ ಕೈಗೊಳ್ಳುವ ಹಂತದಲ್ಲಿ ಇದ್ದಾರೆ. ನೀವು ತಕ್ಷಣ ಮುಖ್ಯ ನ್ಯಾಯಾಧೀಶರನ್ನು ಭೇಟಿ ಮಾಡಿದರೆ ಈ ಹೈಕೋರ್ಟ್ ಪೀಠ ಆಗುವಂತಾದ್ದು ಬಹಳ ವರ್ಷದಿಂದ ಹೋರಾಟ ಇದೆ. ನೀವು ಇವತ್ತು ಉತ್ತರ ಭಾಗದವರು ಮುಖ್ಯಮಂತ್ರಿಗಳಾದಂತಹ ಸಂದರ್ಭದಲ್ಲಿ ಹೈಕೋರ್ಟ್ ಪೀಠ ಆದರೆ ಅದಕ್ಕೆ ಒಂದು ಔಚಿತ್ಯ ಉಳಿಯುತ್ತದೆ. ದಯವಿಟ್ಟು ಅದಕ್ಕೆ ಸರ್ಕಾರ ಸ್ಪಷ್ಟನೆ ನೀಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ನನಗೆ ಗೊತ್ತಿತ್ತು. ಮಾನ್ಯ ವಾಟಾಳ್ ನಾಗರಾಜ್‌ರವರು ಈ ಪ್ರಶ್ನೆಯನ್ನು ತೆಗೆಯುತ್ತಾರೆ ಎಂದು. ಏಕೆಂದರೆ ದಿನಾಗಲೂ ಏನಾದರೂ ಒಂದು ಸಮಸ್ಯೆಯನ್ನು ಎತ್ತಿ ಅವರು ಹೇಳಲೇ ಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇದನ್ನು ನಾನು ಒಪ್ಪುವುದಿಲ್ಲ. ಇದರ ಪ್ರಾಮುಖ್ಯತೆ ತಮಗೆ ಗೊತ್ತಿದೆ. ಏನಾದರೂ ಬೇಕು ಎನ್ನುವ ಪ್ರಶ್ನೆ ಅಲ್ಲ, ಉತ್ತರ ಕರ್ನಾಟಕದ ಪರಿಸ್ಥಿತಿ ಏನಾಗಿದೆ ? ತಾವು ಗುಲ್ಬರ್ಗದಿಂದ ಬಂದಂತಹವರು. ತಮಗೆ ಗೊತ್ತಿದೆ. ನಂಜುಂಡಪ್ಪ ವರದಿಯನ್ನು ಮೂಲೆಗೆ ಹಾಕಿದ್ದೀರಿ. ಇದರ ಬಗ್ಗೆ ಧ್ವನಿ ಎತ್ತದೆ ಇದ್ದರೆ ಹೇಗೆ ? ಆ ಕಡೆಯಿಂದ ಬಂದಿರುವವರು ತಾವು. ಏನೇನಾಗಿದೆ ಎಂಬ ಬಗ್ಗೆ ಒಂದು ಅಂಕಿ ಅಂಶ ಕೊಡಿ. ಒಂದು ಶ್ವೇತ ಪತ್ರವನ್ನು ಹೊರಡಿಸಿ. ಒಂದು ಶ್ವೇತ ಪತ್ರವನ್ನು ಹೊರಡಿಸಿ. ತಾವು ಸಮಗ್ರವಾಗಿ ಹೇಳಿ, ತಾವು.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಮಾಜಿ ವಿರೋಧ ಪಕ್ಷದ ನಾಯಕರಾದಂತಹ, ಪ್ರಸ್ತುತ ವಿಧಾನಸಭೆಯಲ್ಲಿದ್ದಂತಹ ಮಾನ್ಯ ಜಗದೀಶ್ ಶೆಟ್ಟರ್ ಅವರಿಗೆ ಮತ್ತು ಮಾನ್ಯ ವಾಟಾಳ್ ನಾಗಾರಾಜ್‌ರವರಿಗೆ ಹಾಗೂ ಇಡೀ ರಾಜ್ಯಕ್ಕೆ ಗೊತ್ತು. ಮುಖ್ಯ ನ್ಯಾಯಮೂರ್ತಿಗಳು ಎಂದಿದ್ದಾರೆ ಅವರ ಜೊತೆ ಮಾತುಕತೆ ಆಡಬೇಕೆಂದು ಭೇಟಿಯಾಗಿದ್ದೆ. ಆಗ ನೀವೂ ಕೂಡ ಇದ್ದಿರಿ. ತದನಂತರ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಿಂದಿನ ಕಾನೂನು ಸಚಿವರಾಗಿದ್ದಂತಹ ಮಾನ್ಯ ಚಂದ್ರೇಗೌಡರು ಇವರೊಡನೆ ಮಾತುಕತೆಯಾದ ಮೇಲೆ ಏನಾಗಿದೆ. ಎಂಬುದನ್ನು ತಿಳಿದುಕೊಳ್ಳುತ್ತೇನೆ. ಮತ್ತೆ ಇದು ಬಹಳ ಸೂಕ್ಷ್ಮವಾದಂತಹ ವಿಚಾರವಾದ ಕಾರಣ, ಸದನದಲ್ಲಿ ಸ್ಪಷ್ಟವಾಗಿ ಹೇಳಿಕೆಯನ್ನು

ಮಾಡುವುದಕ್ಕಿಂತ ಮುಂಚೆ, ನಾವೆಲ್ಲರೂ ಕೂಡಿ ಈ ವಿಚಾರವಾಗಿ ಮಾತನಾಡಬೇಕಾಗುತ್ತದೆ, ಇದರ ಬಗ್ಗೆ ವಕೀಲರ ಸಂಘವನ್ನು ಕರೆಸಿ ಮಾತನಾಡಬೇಕಾಗುತ್ತದೆ, ಅದರ ಬಗ್ಗೆ ಸರ್ಕಾರ ತೀವ್ರತರವಾದ ಗಮನವನ್ನು ಕೊಡುತ್ತದೆ, ಇನ್ನು ಮಾನ್ಯ ಜಗದೀಶ್ ಶೆಟ್ಟರವರು ಉತ್ತರ ಕರ್ನಾಟಕದಿಂದ ಬಂದಿದ್ದೀರಿ, ಇಲ್ಲಿ ಹೈಕೋರ್ಟ್ ಪೀಠವಾಗಲೇ ಬೇಕೆಂದು ಇದೆ ಎಂದು ಹೇಳಿದರು. ಇದರ ಬಗ್ಗ ಚೀಫ್ ಜಸ್ಟೀಸ್‌ರವರು ಒಪ್ಪಬೇಕಾಗುತ್ತದೆ, ಈ ವಿಚಾರ ಏನಾಗಿದೆ, ಎಂಬುದನ್ನು ನಾನು ತಿಳಿದುಕೊಂಡು ತಮ್ಮೆಲ್ಲರನ್ನೂ ಕರೆಸಿಕೊಂಡು, ವಿಶ್ವಾಸಕ್ಕೆ ತೆಗೆದುಕೊಂಡು ಒಂದು ತೀರ್ಮಾನಕ್ಕೆ ಬರೋಣ, ಇನ್ನು ಮಾನ್ಯ ವಾಟಾಳ್ ನಾಗರಾಜ್‌ರವರು ಶ್ರೀ ನಂಜುಂಡಪ್ಪನವರ ವರದಿ ಏನಾಯಿತು, ಎಂಬ ಬಗ್ಗೆ ಪ್ರಸ್ತಾಪ ಮಾಡಿದರು. ಉತ್ತರ ಕರ್ನಾಟಕದ ಅಭಿವೃದ್ಧಿಯ ಬಗ್ಗೆ ಸಾಕಷ್ಟು ಸಮಿತಿ ವರದಿ ಮಾಡಿದೆ, ಹಿಂದಿನ ಸರ್ಕಾರದಲ್ಲಿ ಮಾನ್ಯ ಎಸ್.ಎಂ. ಕೃಷ್ಣರವರ ನೇತೃತ್ವದಲ್ಲಿ ಮಾನ್ಯ ನಂಜುಂಡಪ್ಪನವರು 9 ತಿಂಗಳಲ್ಲಿ ವರದಿಯನ್ನು ಕೊಟ್ಟರು, ಆ ವರದಿಯನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಕ್ಕೆ ತರತಕ್ಕಂಥ ರೀತಿಯಲ್ಲಿ ಆಗಿನ ಸರ್ಕಾರ ಕೆಲಸವನ್ನು ಮಾಡಿದೆ. ಇದು ಹೇಗೆಂದರೆ ಬೀದರ್ ಜಿಲ್ಲೆಯಲ್ಲಿ ಪಶು ವಿಶ್ವವಿದ್ಯಾಲಯ ಆಗಬೇಕೆಂದು ಇತ್ತು, ಅದನ್ನು ಈಗಾಗಲೇ ಮಾಡಿದ್ದೇವೆ. ಬಿಜಾಪುರ ಜಿಲ್ಲೆಯಲ್ಲಿ ಮಹಿಳಾ ವಿಶ್ವವಿದ್ಯಾನಿಲಯವಾಗಬೇಕೆಂದು ಇತ್ತು, ಅದನ್ನು ಮಾಡಿದ್ದೇನೆ, ಮತ್ತೆ ಹುಬ್ಬಳ್ಳಿಯಲ್ಲಿ ಹನಿ ನೀರು ನಿಗಮವನ್ನು ಪ್ರಸ್ತಾಪ ಮಾಡಿದ್ದಾರೆ, ಅದನ್ನು ಕೂಡ ಮಾಡಿದ್ದೇವೆ, ಇವತ್ತು ಆ ಭಾಗದ ಅಭಿವೃದ್ಧಿಯಾಗುವಂತಹ ರೀತಿಯಲ್ಲಿ ಬೀದರ್ ಜಿಲ್ಲೆಯಿಂದ ಬೆಳಗಾಂ ಜಿಲ್ಲೆಯವರೆಗೂ, ಅಂದರೆ ಉತ್ತರ ಕರ್ನಾಟಕ ಭಾಗಕ್ಕೆ ಏನು ಹೆಚ್ಚಿನ ರೀತಿಯಲ್ಲಿ ಶಿಫಾರಸ್ಸುಗಳನ್ನು ಮಾಡಿದ್ದಾರೆ, ಅದರ ಬಗ್ಗೆ ಆಗಿನ ಸರ್ಕಾರದಲ್ಲಿ ಸಾಕಷ್ಟು ಗಮನವನ್ನು ಕೊಟ್ಟಿದ್ದೇವೆ, ತಮಗೆ ಬೇಕೆಂದರೆ ಪೂರ್ಣ ಪ್ರಮಾಣದಲ್ಲಿ ಈ ಅಧಿವೇಶನದಲ್ಲಿ, ಯಾವ ಯಾವುದರಲ್ಲಿ ಅನುಷ್ಠಾನಕ್ಕೆ ತಂದಿದ್ದೇವೆನ್ನು ವಿಚಾರವನ್ನು ತಿಳಿಸುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರು ಹೈದರಾಬಾದ್ ಕರ್ನಾಟಕದ ಬಗ್ಗೆ ಹೇಳಲಿಲ್ಲ, ಇದರ ಬಗ್ಗೆ ವಿಶೇಷ ಸ್ಥಾನಮಾನದ ಬಗ್ಗೆ ಅನೇಕ ಬಾರಿ ಒತ್ತಾಯ ಮಾಡುತ್ತಿದ್ದಾರೆ, ತಾವೂ ಸಹ ಹೈದರಾಬಾದ್ ಕರ್ನಾಟಕ ಭಾಗದಿಂದ ಬಂದಿರುವವರು, ಇದರ ಬಗ್ಗೆ ತಾವು ದಯಮಾಡಿ ಹೇಳಬೇಕು.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೇ, ಎಲ್ಲರೂ ಈ ರೀತಿಯಾಗಿ ಕೇಳಿದರೆ ಹೇಗೆ ? ಎಲ್ಲಾ ವಿಚಾರಗಳನ್ನು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಂತಹ ಸಂದರ್ಭದಲ್ಲಿ ಹೇಳೋಣ. ಈಗ ಹೈದರಾಬಾದ್ ಕರ್ನಾಟಕದ ರೀಜನಲ್ ಇದು ಬ್ಯಾಲೆನ್ಸ್‌ಗೆ ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ಇದೆ, ಮತ್ತೆ ವಿಶೇಷವಾಗಿ ಸಂವಿಧಾನದಲ್ಲಿ ಆರ್ಟಿಕಲ್ 371 ಅನ್ನು

ತಿದ್ದುಪಡಿ ಮಾಡುವ ರೀತಿಯಲ್ಲಿ, ರಾಜ್ಯಸರ್ಕಾರದ ಆಗಿನ ಮುಖ್ಯಮಂತ್ರಿಯವರು ತಮ್ಮ ನೇತೃತ್ವದಲ್ಲಿ ಮಾನ್ಯ ಜಗದೀಶ್ ಶೆಟ್ಟರ್, ಮಾನ್ಯ ಬಿ.ಎಸ್ ಯಡಿಯೂರಪ್ಪನವರು ಮತ್ತೆ ತಾವೂ ಕೂಡ ಅದರಲ್ಲಿ ಇದ್ದಿರಿ, ಆಗ ಆಗಿನ ಕೇಂದ್ರ ಸರ್ಕಾರದ ಉಪ ಮುಖ್ಯಮಂತ್ರಿಯವರಿಗೆ ಮನವಿಯನ್ನು ಕೊಟ್ಟಿದ್ದೇವೆ. ಇವತ್ತು ಯಾವ ರೀತಿಯಲ್ಲಿ ತೆಲಂಗಾಣ ಮಾದರಿಯಲ್ಲಿ ಹಾಗೂ ವಿದರ್ಭದಲ್ಲಿ 371 ಅನ್ನು ತಿದ್ದುಪಡಿಮಾಡಿ, ಏನು ಹೆಚ್ಚಿನ ಸವಲತ್ತುಗಳನ್ನು ಕೊಟ್ಟಿದ್ದಾರೆ, ಅದೇ ರೀತಿಯಲ್ಲಿ ಇವತ್ತು ಹಿಂದುಳಿದ ಭಾಗಗಳಿಗೆ ಕೊಡಬೇಕೆಂದು, ಇದೆ, ಅದು ಸಹ ಪರಿಶೀಲನೆಯಲ್ಲಿ ಇದೆ, ಕೇಂದ್ರ ಸರ್ಕಾರಕ್ಕೆ ಮತ್ತೆ ಹೋಗುತ್ತೇವೆ, ಪ್ರಸ್ತಾಪ ಮಾಡುತ್ತೇವೆ ಹಾಗೂ ಒತ್ತಾಯ ಮಾಡುತ್ತೇವೆ.

ಇ) ವಿಷಯ : ಕೊಡಗು ಜಿಲ್ಲೆಯಲ್ಲಿ ಮಳೆಯಿಂದ ಉಂಟಾಗಿರುವ ಹಾನಿ ಬಗ್ಗೆ

ಶ್ರೀ ಕೆ.ಜಿ. ಬೋಪಯ್ಯ (ಮಡಿಕೇರಿ) : ಮಾನ್ಯ ಅಧ್ಯಕ್ಷರೇ, ಎರಡು ದಿವಸಗಳಿಂದ ಕೊಡಗು ಜಿಲ್ಲೆಯಲ್ಲಿ ವಿಪರೀತ ಮಳೆ ಬಂದು, ಅನೇಕ ಗ್ರಾಮಾಂತರ ಪ್ರದೇಶಗಳಲ್ಲಿ ಮನೆಗಳೆಲ್ಲಾ ಕಳೆದುಕೊಂಡಿದ್ದಾರೆ, ರಸ್ತೆ ಸಂಪರ್ಕ ಕಡಿದುಹೋಗಿದೆ, ವಿದ್ಯುತ್ ಸಂಪರ್ಕ ಕಡಿದು ಹೋಗಿದೆ, ಮತ್ತೆ ಏನು ಸಣ್ಣ ಸಣ್ಣ ತೋಟಗಳು ಇವೆ, ಅದಕ್ಕೆ ಹಾಕಿರುವಂತಹ ಎಲ್ಲಾ ಕ,ಟ್ರಿಮೇಡ್ ಬ್ರಿಡ್ಜ್‌ಗಳೆಲ್ಲಾ, ಕೊಚ್ಚಿ ಹೋಗಿ, ಜನರು ಇವತ್ತು ತಿರುಗಾಡದಂತಹ ಪರಿಸ್ಥಿತಿಯಲ್ಲಿದೆ, ಬಹಳಷ್ಟು ತೊಂದರೆಗಳು ಇಡೀ ಜಿಲ್ಲೆಯಲ್ಲಿ ಆಗಿದೆ, ಮೂರು ದಿವಸಗಳಿಂದ, ವಿದ್ಯುತ್ ಸಂಪರ್ಕವಿಲ್ಲದಂತೆ ಆಗಿದೆ, ಮಾನ್ಯ ಕಂದಾಯ ಸಚಿವರು ಇದರ ಬಗ್ಗೆ ತುರ್ತು ಗಮನ ಹರಿಸಿ ಜನರಿಗೆ ಪರಿಹಾರವನ್ನು ಕೊಡುವ ವ್ಯವಸ್ಥೆಯನ್ನು ಮಾಡಬೇಕೆಂದು, ತಮ್ಮ ಮೂಲಕ ಮಾನ್ಯ ಕಂದಾಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ಬಸವರಾಜ (ವಿರಾಜ ಪೇಟೆ) : ಮಾನ್ಯ ಅಧ್ಯಕ್ಷರೇ, ವಿರಾಜಪೇಟೆ ತಾಲ್ಲೂಕಿನಲ್ಲೂ ಕೂಡ, ಭಾರೀ ಮಳೆಗಾಳಿಯಿಂದಾಗಿ, ತೀರಾ ಅನಾಹುತಗಳು ಸಂಭವಿಸಿದೆ, ಅದರಲ್ಲಿ ವಿರಾಜಪೇಟೆಯ ನಗದರಲ್ಲಿ ಎರಡು ಮನೆಗಳ ಕುಸಿತವಾಗಿದೆ, ಒಂದು ಮನೆಯ ಕುಸಿತದ ಸಂದರ್ಭದಲ್ಲಿ ಶ್ರೀ ಸುಬ್ರಮಣ್ಯ ಎನ್ನುವವರು, ಮನೆಯಲ್ಲಿ ಮಲಗಿದ್ದಂತಹ ಸಂದರ್ಭದಲ್ಲಿ ಗೋಡೆ ಬಿದ್ದು, ಅವರ ಕಾಲು ಮುರಿದಿದೆ, ಒಂದು ವಿಷಾದದ ಸಂಗತಿ ಎಂದರೆ ಅವರು ಆಸ್ಪತ್ರೆಗೆ ದಾಖಲು ಆಗಿದ್ದಾರೆ, ಮತ್ತೆ ಮನೆ ಕುಸಿತವಾಗಿದ್ದರೂ ಸಂಬಂಧಪಟ್ಟಂತಹ ಕಂದಾಯ ಇಲಾಖೆಯ ಅಧಿಕಾರಿಗಳು ಯಾರೂ ಸಂಪರ್ಕ ಮಾಡಿಲ್ಲ. ಅವರಿಗೆ ಏನಾದರೂ ಸಹಾಯ ಮಾಡಬೇಕೆನ್ನುವ ಉತ್ಸುಕತೆಯನ್ನು ತೋರಿಸಲಿಲ್ಲ, ಇಂತಹ ಸಂದರ್ಭದಲ್ಲಿ ನಾನೇ ಖುದ್ದಾಗಿ ಅವರನ್ನು ಸಂಪರ್ಕ ಮಾಡಿದಂತಹ ಸಂದರ್ಭದಲ್ಲಿ ಅವರಿಗೆ ಕಾಲು ಮುರಿತಕ್ಕೆ ಸ್ಟೀಲ್ ರಾಡ್ ಅನ್ನು ಜೋಡಣೆ ಮಾಡಬೇಕಾಗಿದೆ, ಅದಕ್ಕೆ ತುಂಬಾ ಹಣ ಖರ್ಚಾಗುತ್ತದೆ, ಇದಕ್ಕೆ ತಾವು ಸಹಕಾರವನ್ನು ಕೊಡಿ, ಎಂದು ಶ್ರೀ ಸುಬ್ರಮ್ಮಣ್ಯರವರ ಕುಟುಂಬದವರು ನನ್ನನ್ನು ಸಂಪರ್ಕ ಮಾಡಿದ್ದರು. ಈ